ಅಕಸ್ಮಾತ್ ನೋಡಿದೆ. ಮತ್ತೆ ಮುಂದೆ ನಡೆದೆ. ಮುಂದೆ ಹೋದ ಮೇಲೆ ಅದರ ಆಸೆಯಾಗಿಬಿಟ್ಟಿತು. ಹೆಕ್ಕಿಕೊಳ್ಳುವ ಎಂದು ಹಿಂತಿರುಗಿದೆ... ನನ್ನ ನಾಲ್ಕು ಕಣ್ಣಿಗೂ ಅದು ಗೋಚರಿಸಲಿಲ್ಲ. ದೋಷ ಕಣ್ಣಿನದ್ದೋ ಬಿಸಿಲಿನದ್ದೋ ಗೊತ್ತಾಗಲಿಲ್ಲ. ಅಥವಾ ನನ್ನ ಕೈ ಸೇರಿ ಹಳೇ ಡೈರಿಯಲ್ಲಿ ದೂಳಿನಿಂದ ಉಸಿರುಗಟ್ಟಿ ಅಸುನೀಗಲು ಅದಕ್ಕೆ ಮನಸ್ಸಿರಲಿಲ್ಲ ಎಂದು ಕಾಣುತ್ತದೆ... ಹಾರಿಹೋಗಿರಬೇಕು. ಹಕ್ಕಿಯ ಚಲನೆ ರೆಕ್ಕೆಗೂ, ರೆಕ್ಕೆಯ ಗರಿಗೂ ಬಂದಿರಬೇಕು... ಎಂದೆಣಿಸಿ ಹೋದದ್ದಾಗಿತ್ತು.

ಹಕ್ಕಿ, ರೆಕ್ಕೆ, ಹಾರಾಟ ಎನ್ನುವಾಗೆಲ್ಲಾ ಹಕ್ಕಿಯಲ್ಲದೆಯೂ ಹಾರುವ ಭಾಗ್ಯ ಪಡೆದ ಅದೆಷ್ಟೋ ಸುಂದರ ಸೃಷ್ಟಿಗಳು ಪ್ರಕೃತಿಯಲ್ಲಿ ನಮ್ಮನ್ನು ಅಚ್ಚರಿಗೊಳಿಸುತ್ತವೆ. ಪುಟ್ಟ ಪುಟ್ಟ ಬಿಳಿಯ ಎರಡೇ ಎರಡು ಪುಚ್ಛದಂತಹ ಎಸಳನ್ನು ತಲೆ ಮೇಲೆ ಜುಟ್ಟಿನಂತೆ ಅಂಟಿಸಿಕೊಂಡು ಹಾರುವ ಎಕ್ಕೆ ಬೀಜ, ಸುತ್ತಲೂ ಹಾರುತ್ತಾ ಅಲೆಕ್ಸಾಂಡರನ ಹೇರ್‌ಸ್ಟೈಲಿರುವ ಏಕೈಕ ಮಹರಾಯ ನಾನೇ ಎನ್ನುವಂತೆ ಹಾರುವಾಗ ನೋಡಲು ಎಂಥ ಸೋಜಿಗ... ಹಕ್ಕಿಪುಚ್ಛಗಳಲ್ಲದಿದ್ದರೂ ಅದೇ ನವಿರುತನ ಹೊತ್ತು ಹಾರುವ, ನಿಜಕ್ಕೂ ಅದ್ಭುತ ಸೃಷ್ಟಿಯೇ ಸರಿ ಎನಿಸಿಬಿಡುವ ಅವುಗಳ ಆ ರೇಷಿಮೆ ನುಣಪು ರೇಷಿಮೆಗಿಂತಲೂ ನುಣಪು.... ಹಾರುವಾಗ ಎಷ್ಟು ಹಗುರ ಅದಕ್ಕೆ; ಭಾರವೆಂಬುದೇ ಇಲ್ಲ. ರಾತ್ರಿಯ ಕತ್ತಲ ಪರದೆಯ ಮೇಲೆ ಆಕಾಶದ ನಕ್ಷತ್ರಗಳಿಗೆಲ್ಲ ರೆಕ್ಕೆ ಮೂಡಿ ಹಾರಲು ಶುರುವಿಟ್ಟುಕೊಂಡರೆ ಹೇಗೆ ಕಾಣಬಹುದೋ ಹಾಗೆ ಈ ಚೆಂದದ ಹತ್ತಿಯಂತಹ ಜೀವಂತ ನಕ್ಷತ್ರಗಳು ಕಣ್ಮುಂದೆ ಹಾರುತ್ತವೆ. ಹಾರುವ ಆಸೆಯ ಬೀಜವೊಂದನ್ನು ನಮ್ಮೊಳಗೆ ಮೊಳೆಯಲು ಬಿಟ್ಟು. ಇನ್ನೂ ಕೆಲವು ಬೀಜಗಳು ಹಾಗೆ.... ಹಾರುವ ಉಮೇದಿಗೆ ರೆಕ್ಕೆಯಂಥದ್ದೇ ನೋವೊಂದು ಮೂಡಿಸಿಕೊಂಡು ಹಾರಾಡುತ್ತವೆ ಗಾಳಿಬೀಜದ ಹಾಗೆ. ಗಾಳಿಬೀಜದ ನಡುವಿನ ಹೊಟ್ಟೆಯಂತಹ ಭಾಗವನ್ನು ಸುಲಿದರೆ ಒಳಗಿನ ಫಲ ಸಿಕ್ಕುತ್ತದಲ್ಲ ಬಾದಾಮಿಯನ್ನೋ, ಆಕ್ರೋನಟ್ಟನ್ನೋ ತಿಂದಂಥಾ ಸವಿ... ಬಾಲ್ಯದಲ್ಲಿ ಎಲೆ ಉದುರುವ ಕಾಲ ಬಂದುಬಿಟ್ಟರೆ ಸಾಕು ನಮ್ಮ ನಮ್ಮ ಪಾಟೀಚೀಲಗಳಲ್ಲಿ ರಾಶಿ ರಾಶಿ ಗಾಳಿಬೀಜಗಳು... ಮರವೆಲ್ಲಿರುತ್ತಿತ್ತೋ ಗೊತ್ತಿಲ್ಲ. ಈ ಬೀಜಗಳಿಗಾಗಿ ಮರವನ್ನು ಹುಡುಕಿ ಹೋಗುವ ಅಗತ್ಯವೂ ಇರಲಿಲ್ಲ. ಎಲ್ಲೆಂದರಲ್ಲಿ ಹಾರಿ ಬಂದು ಕಣ್ಣಿಗೆ ಕಾಣುವಂತೆ ಕೂತುಬಿಟ್ಟಿರುತ್ತಿದ್ದವು. ಹಾಗೂ ಒಮ್ಮೆ ನೋಡಲೇಬೇಕೆಂದು ಆಸೆಪಟ್ಟು ಈ ಮರವನ್ನು ಹುಡುಕಿಕೊಂಡು ಹೋಗಿ ನಿರಾಸೆಯೂ ಆಗಿತ್ತು. ಕಾರಣ ಈ ಮರವೇನೋ ಚೆಂದವಿರುತ್ತದೆ, ಎಷ್ಟು ಬೇಕೋ ಅಷ್ಟು ಬೀಜಗಳನ್ನು ಕಿತ್ತು ಹೊತ್ತು ತರಬಹುದು ಎಂದುಕೊಂಡು ಹೋಗಿದ್ದ ನನಗೆ ಅದು ಅಷ್ಟೊಂದು ಎತ್ತರ ಇರಬಹುದೆಂಬ ಅಂದಾಜೇ ಇರಲಿಲ್ಲ. ಅದರ ದಪ್ಪ ಬೊಡ್ಡೆ, ಸಣ್ಣ ಸಣ್ಣ ರೆಂಬೆಕೊಂಬೆಗಳು, ಕೈಗೆಟುಕದ ಗುಚ್ಛ ಗುಚ್ಛ ಬೀಜಗಳನ್ನು ನೋಡಿ ಮನಸ್ಸು ಮುದುರಿತ್ತು. ಕೊನೆಗೆ ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ಅದರ ಬುಡದಲ್ಲಿ ಬಿದ್ದಿದ್ದ ಬೀಜಗಳನ್ನೇ ಆರಿಸಿಕೊಂಡು ಬಂದಿದ್ದೆ. ಆಮೇಲೆ ಅದನ್ನು ಹುಡುಕಿಕೊಂಡು ಹೋಗುವ ಮನಸ್ಸು ಮತ್ತೆ ಅರಳಲಿಲ್ಲ. ಹೇಗೂ ನಾನು ಇರುವಲ್ಲಿಗೇ ಅದು ಹಾರಿ ಬರುತ್ತದಲ್ಲ ನನ್ನನ್ನೆ ಹುಡುಕಿಕೊಂಡು... ಮತ್ತೆ ಯಾಕೆ ನಾನದನ್ನು ಹುಡುಕುವುದು... ಹಾಗಾಗಿ ಸುಮ್ಮನಾಗಿಬಿಟ್ಟಿದ್ದೆ. ಆದರೆ ಹಾರುವ ಕ್ರಿಯೆಯೊಂದು ಕಣ್ಣ ಮುಂದೆ ಪ್ರತ್ಯಕ್ಷವಾಗಿ ಗರಿಯ ರೂಪದಲ್ಲಿ ನಿಂತಾಡುವುದನ್ನು ಮಾತ್ರ ತಪ್ಪಿಸಲಿಲ್ಲ.

ಅದು ಹಕ್ಕಿಯೇ ಆಗಬೇಕೆಂದು ಕೇಳುವುದಿಲ್ಲ... ಹಾರುವ ಯಾವುದಾದರೂ ಸರಿ; ಚಿಟ್ಟೆಯೋ ಪತಂಗವೋ, ಕನಿಷ್ಠ ಕೀಟವಾಗಿಯಾದರೂ ಸರಿ ಹಾರಬೇಕೆಂದು ಬಯಸುತ್ತದೆ. ಹಾರುವ